**CW : 10**
PW : 10

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.100/2025

ಸಾಕ್ಷಿದಾರರ ಹೆಸರು : ಉದಯ
ತಂದೆಯ ಹೆಸರು : ಪೂವಪ್ಪ
ಪ್ರಾಯ : 28 ವರ್ಷ
ಉದ್ಯೋಗ ಎಲೆಕ್ಟ್ರೀಶಿಯನ್
ವಾಸಸ್ಥಳ : ಕಾವಳಕಟ್ಟೆ ಗ್ರಾಮ
ದಿನಾಂಕಃ **11.05.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ನಿಪಿ.8 ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು ನಿಪಿ.8 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.8ಸಿ ಎಂದು ಗುರುತಿಸಲಾಯಿತು. ಸುಮಾರು 1ವರೆ ವರ್ಷಗಳ ಹಿಂದೆ ಸಂಪ್ಯ ಪೊ. ಠಾಣೆಯಲ್ಲಿ ನಿಪಿ8ಕ್ಕೆ ಸಹಿ ಮಾಡಿದ್ದೇನೆ. ಯಾವ ಕಾರಣಕ್ಕೆ ನಿಪಿ8ಕ್ಕೆ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೆ ಸ್ವತ್ತನ್ನು ತಮ್ಮ ವಶ ಪಡೆದಿಲ್ಲ. ನಿಪಿ8ರಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ. ಆರೋಪಿ ನನಗೆ ಗೊತ್ತಿಲ್ಲ.

ನಿಪಿ7ರಲ್ಲಿ ಕಾಣುವ ಬ್ಯಾಟರಿಗಳನ್ನು ನಾನು ಈ ಮೊದಲು ಎಲ್ಲಿಯೂ ನೋಡಿಲ್ಲ. ಸಾಕ್ಷಿಗೆ ತಕ್ಷೀರು ಸ್ಥಳದ ಮಹಜರು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರನ್ನು ನಿಪಿ11 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು11ಬಿ ಎಂದು ಗುರುತಿಸಲಾಯಿತು.

ನಿಪಿ11ಕ್ಕೆ 1ವರೆ ವರ್ಷದ ಹಿಂದೆ ಪುತ್ತೂರು ಗ್ರಾಮಾಂತರ ಪೊ.ಠಾಣೆಯಲ್ಲಿ ಸಹಿ ಮಾಡಿದ್ದೇನು. ನಿಪಿ11 ರಲಿಪ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ. ನನ್ನ ಸಮಕ್ಷಮ ಪೋಲಿಸರು ಆರೋಪಿ ತೋರಿಸಿದಂತೆ ಯಾವದೆ ಮಹಜರ ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಃ ಅನುಮತಿ ನೀಡಲಾಯಿತು)

**CW : 10**
PW : 10

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ದಿ.06.12.2024 ರಂದು ಮಂಗಳೂರು ತಾಲ್ಲೂಕಿನ ಉಲ್ಲಾಳದಲ್ಲಿರುವ ಅಕ್ಕನ ಕರೆ ಎಂಬಲ್ಲಿ ಆರೋಪಿಯು ತೋರಿಸಿಕೊಟ್ಟ ಚಾಸಾ4ರವರಿಗೆ ಸೇರಿದ ಗುಜರಿ ಅಂಗಡಿಯಲ್ಲಿ ನನ್ನ ಮತ್ತು ಚಾಸಾ9 ರವರ ಸಮಕ್ಷಮ ನಿಪಿ8ರಂತೆ ಮಹಜರು ಕ್ರಮ ಜರುಗಿಸಿ ನಿಪಿ7ರಲ್ಲಿ ಕಾಣುವ 24 ಬ್ಯಾಟರಿಗಳನ್ನು ತಮ್ಮ ವಶ ಪಡೆದರು ಆಗ ನಾನು ಸ್ಥಳದಲ್ಲಿಹಾಜರಿದ್ದು ನಿಪಿ8ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಆ ಸಮಯದಲ್ಲಿ ಪೋಲಿಸರು ವಿಡಿಯೋಗ್ರಾಫಿ ಕೂಡಾ ಮಾಡಿದ್ದರು ಎಂದರೆ ಸರಿಯಲ್ಲ.

ಅದೇ ದಿನ ಬಲ್ನಾಡು ಗ್ರಾಮದ ಮಾಪ್ಲೆಕೊಚ್ಚಿ ಎಂಬಲ್ಲಿ ಆರೋಪಿಯು ಮ.1.30 ರಿಂದ 2.15ರ ಸಮಯದಲ್ಲಿ ತಕ್ಷೀರು ಮಾಡಿದ ಸ್ಥಳವನ್ನು ತೋರಿಸಿಕೊಟ್ಟಿದ್ದು ಆಗ ನನ್ನ ಮತ್ತು ಚಾಸಾ10 ರವರ ಸಮಕ್ಷಮ ಪೋಲಿಸರು ನಿಪಿ11 ರಂತೆ ಮಹಜರ ಕ್ರಮ ಜರುಗಿಸಿದ್ದು ಆಗ ನಾನು ಸ್ಥಳದಲ್ಲಿ ಹಾಜರಿದ್ದು ನಿಪಿ11 ಕ್ಕೆ ಸಹಿ ಮಾಡಿದ್ದೇನು ಎಂದರೆ ಸರಿಯಲ್ಲ.

ನಿಪಿ8 ಮತ್ತು 11 ಮಹಜರ ಸಂಬಂಧ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡಾ ಆರೋಪಿಯನ್ನು ರಕ್ಷಿಸುವ ಸಂಬಂಧ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟಿಸವಾಲು ಆರೋಪಿ ಪರ ಃ

ಏನೂ ಇರುವುದಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 10**
PW : 10